

ಎಡದಿಂದ ಬಲಕ್ಕೆ:

1. ಹೊಸದೇನೇ ಇರಲಿ ತರಿಸುತ್ತಾನೆ, ತಮ್ಮ(4)
3. ಮುಂದಾಗುವುದೇನೇ ಇರಲಿ, ದಾಸ್ತಾನು ಮಳಿಗೆ ಎಲ್ಲಿ? (3)
4. ಸುರಂಗದೊಳಗೆ ಸಿಕ್ಕಿದ್ದು ಈ ಪ್ರಸಿದ್ಧ ತಂತೀ ವಾದ್ಯ (3)
6. ಬಳಕೆಯಾಗುವ ಮೊದಲೇ 'ಸಮಯದ ಹೆದರಿಕೆ' (4)
7. ಹೊಣೆ ಹೊರಿಸುವ ಕಾರ್ಯಕ್ಕೆ ಪ್ರಯತ್ನಿಸು (4)
9. ಮರೆತನೇನು? ಆತನೇ ಅಲ್ಲಿನ 'ಶ್ರೇಷ್ಠ ಮನುಷ್ಯ' (4)
12. 'ಚಿಪ್ಪಿನ ಸರೀಸೃಪದಷ್ಟು ಬೇಗ'–ಸುಪ್ರಸಿದ್ಧ ಉಪಮೆ (4)
14. ಕೊರಗುವವನ ಚಿಂತೆಯೇ ಕ್ರೂರ ಶಿಕ್ಷಾ ತಾಣ (3)
15. ಈ ಭುವನದ ಬಗೆಗೆ ಎಂಥ ಗಾಢ ಮನೋಬಂಧ! (3)
16. ರಾಣಿಗೆ ರಂಗು ಎರಚಿದ್ದಕ್ಕೆ ಸಮರ ಪ್ರದೇಶವೇ ಸೃಷ್ಟಿಯಾಯಿತು (4)

ಮೇಲಿಂದ ಕೆಳಕ್ಕೆ:

1. ಮೇಧಾವಿಯನ್ನು ಸನ್ಮಾನಿಸಿದ ಸಮಾಜ ಸಮೂಹ (4)
2. ಹೊಸ ಹೆಸರು ಏನಲ್ಲ ಮರ, ಗಿಡ ಎಂದೇ ಅರ್ಥ (4)
3. ಹಸುಗಳು ಗುಂಪಾದಲ್ಲೆಲ್ಲ ಅವನ್ನು ಕಾಯುವವನೂ ಇದ್ದಾನೆ (3)
5. ಹಸಿರು ಗಿಣಿ ಕಂಡಲ್ಲೇ ಹಿಟ್ಟು ಮಾಡುವ ಮಿಲ್ಲು (3)
6. ಕೊರಕಲಿನ ಕೆಲಸದ ಲೆಕ್ಕಗಳನ್ನು ಬರೆದಿಡುವ ಗುಮಾಸ್ತ (4)
8. ಸುರಂಗ ದಾಟಿಸುವವನಿಗೆ ಸಿಕ್ಕಿದ್ದು 'ದೇವತೆಯ ಗೆಳೆತನ' (4)
10. ರಾಧೇಯನ ಕಥೆ ಕೇಳಿ ಭಾರೀ ದುಃಖ, ಅಳು (3)
11. ಜೇನಿಗೆ ಕೈ ಹಾಕಹೋದರೆ ಹೊರಬಂದದು ದುಂಬಿ (4)
12. ಅಸ್ಥಿಗಳನ್ನೇ ಎಳೆದು ಗಳಿಸಿದ ಐಶ್ವರ್ಯದ ಪಾಲು (4)
13. ವಿದ್ಯೆಯನ್ನೇ ಗಳಿಸಲಿಲ್ಲ ಎಂಬುದೇ ಭಾರೀ ಯಾತನೆ (3)

## 02–07–15ರ ಉತ್ತರಗಳು

ಎಡದಿಂದ ಬಲಕ್ಕೆ:

1. ಹೊಸತನ; 3. ಕವಡೆ; 4. ಗಡಿಗೆ; 6. ತರಾತುರಿ; 7. ಸಬಕಾರ; 8. ಸಾಲುದೀಪ; 10. ಪರಮೇಶ; 12. ಸಮಾಧಾನ; 14. ಮೆಲುದನಿ; 16. ನಿತ್ರಾಣ; 17. ಕಡಿತ, 18. ಸುಮಧುರ.

ಮೇಲಿಂದ ಕೆಳಕ್ಕೆ:

1. ಹೊಡೆತ; 2. ನಗರಿ; 3. ಕಟುಕಾರ್ಯ; 5. ಗೆದ್ದಲು; 7. ಸಭಾಕಂಪ; 9. ಪಲಾಯನ; 11. ಮೇದಿನಿ; 13. ಕ್ರಮಾಗತ; 14. ಮೆಣಸು; 15. ನಿಕರ (=ನಿಖರ).

## ಪ್ರಶ್ನಾಂಕಣ

# ಅತ್ಯುನ್ನತ ಪರ್ವತ-ಯಾವುದು? ಎಲ್ಲಿದೆ?

ಅದು ಯಾವುದೇ ಆಗಿರಲಿ, ಎಲ್ಲೇ ಇರಲಿ, ಒಂದಂಶ ಸ್ಪಷ್ಟ: ಭೂಮಿಯ ಮೇಲೆಯೇ ಆದರೂ ಹಿಮಾಲಯದ ಗೌರೀಶಂಕರವಂತೂ ಅದಲ್ಲ. ವಾಸ್ತವ ಏನೆಂದರೆ ಪರ್ವತಗಳಿರುವುದು ಧರೆಯಲ್ಲಷ್ಟೇ ಏನಲ್ಲ. ನಮ್ಮ ಸೌರವ್ಯೂಹದಲ್ಲಿ ಶಿಲಾಪದರಗಳಿಂದಾದ ಗಟ್ಟಿ ನೆಲದ ಇತರ ಕೆಲವಾರು ಕಾಯಗಳು ಪರ್ವತಗಳನ್ನು ಧರಿಸಿವೆ. ಬುಧ, ಶುಕ್ರ, ಮಂಗಳ– ಈ ಮೂರೂ ಗ್ರಹಗಳಲ್ಲಿ ನಮ್ಮ ಚಂದ್ರನೂ ಸೇರಿದಂತೆ ಹಲವಾರು ಚಂದ್ರರಲ್ಲಿ ಹಾಗೂ ಕೆಲ ಕ್ಷುದ್ರಗ್ರಹಗಳಲ್ಲೂ ಪರ್ವತಗಳಿವೆ. ಸ್ಪಷ್ಟವಾಗಿಯೇ ಇಂಥ ಪರ್ವತಗಳದು ಭಿನ್ನ ಭಿನ್ನ ಎತ್ತರ. ಈವರೆಗೆ ಗುರುತಿಸಲಾಗಿರುವ ಮತ್ತು ನಿಖರವಾಗಿ ಅಳೆಯಲ್ಪಟ್ಟಿರುವ ಪ್ರಥಮ ನಾಲ್ಕು ಅತ್ಯುನ್ನತ ಪರ್ವತಗಳ ಅವುಗಳ ನೆಲೆ ಮತ್ತು ಎತ್ತರಗಳ ಸಂಕ್ಷಿಪ್ತ ವಿವರಗಳು:

1. ಗೌರೀಶಂಕರ (ಮೌಂಟ್ ಎವರೆಸ್ಟ್): ನಮ್ಮ ಧರೆಯ ದ್ವಿತೀಯ ಅತಿ ದೀರ್ಘ ಪರ್ವತ ಪಂಕ್ತಿ ಹಿಮಾಲಯದಲ್ಲಿ ತಲೆ ಎತ್ತಿ ನಿಂತಿರುವ ಈ ಪರ್ವತ ಶಿಖರ ಉನ್ನತಿಯಲ್ಲಿ ನಾಲ್ಕನೆಯ ಸ್ಥಾನದಲ್ಲಿದೆ. ಅದರ ಎತ್ತರ ಸಾಗರ ಮಟ್ಟದಿಂದ ಮೇಲಕ್ಕೆ 29,035 ಅಡಿ. ಎಂದರೆ ಸಮೀಪ 8.8 ಕಿಲೋಮೀಟರ್.

2. ಮೌನಾಕೀಯಾ: ಗೌರೀಶಂಕರವನ್ನು ಭಾರೀ ಅಂತರದಿಂದ ಮೀರಿಸಿರುವ ಔನ್ನತ್ಯದ ಶಿಖರವನ್ನು ಪಡೆದಿರುವ ಈ ಪರ್ವತ ನಮ್ಮ ಭೂಮಿಯಲ್ಲೇ (ಚಿತ್ರ–2) ಇದೆ. ಶಾಂತ ಸಾಗರದಲ್ಲಿರುವ 'ಹವಾಯ್ ದ್ವೀಪ'ಗಳನ್ನು ಹೊತ್ತು



ನಿಂತಿರುವ ಈ ಪರ್ವತದ ಬಹುಭಾಗ ಕಡಲಿನಲ್ಲೇ ಮುಳುಗಿ ನಿಂತಿದೆ. ಸಾಗರದ ತಳದ ನೆಲದ ಮೇಲಿನ ಬುಡದಿಂದ ಈ ಪರ್ವತದ ಎತ್ತರ 32,696 ಅಡಿ! ಎಂದರೆ ಸಮೀಪ 9.9 ಕಿ.ಮೀ. ಹಾಗೆ ಧರೆಯಲ್ಲಿ ಪ್ರಥಮ ಸ್ಥಾನ ಪಡೆದಿದ್ದರೂ ಒಟ್ಟಾರೆ ಸೌರವ್ಯೂಹದಲ್ಲಿ ಮೌನಾಕೀಯಾ ಮೂರನೇ ಸ್ಥಾನದಲ್ಲಿದೆ.

3. ಮ್ಯಾಕ್ಸ್‌ವೆಲ್ ಮಾಂಟೆ: 38,300 ಅಡಿ ಎಂದರೆ 11.6 ಕಿ.ಮೀ. ಎತ್ತರ ಇರುವ ಈ ಪರ್ವತ ಶುಕ್ರಗ್ರಹದಲ್ಲಿದೆ (ಚಿತ್ರ–3). ಆ ಗ್ರಹದ ನರಕ ಸದೃಶ ನೆಲದ ಮೇಲಿನ ಜ್ವಾಲಾಮುಖಿಯೊಂದು ಲಾವಾ ಹರಿಸಿ ತಣಿದು, ಹರಿಸಿ ತಣಿದು, ಹಾಗೆ ಬೆಳೆದು ಈ ಎತ್ತರ ಮುಟ್ಟಿದೆ.

4. ಒಲಿಂಪಸ್ ಮಾನ್ಸ್: ಇಡೀ ಸೌರವ್ಯೂಹದಲ್ಲೇ ಎತ್ತರದಲ್ಲಿ ಪ್ರಥಮ ಸ್ಥಾನದಲ್ಲಿರುವ ಈ ಪರ್ವತ ಭೂ ನೆರೆಯ ಮಂಗಳ ಗ್ರಹದಲ್ಲಿದೆ (ಚಿತ್ರ–1) ಈ ಪರ್ವತದ ಉನ್ನತಿಯನ್ನು ಈ ಹಿಂದಿನ ಮೂರೂ ಪರ್ವತಗಳಿಗೆ ಹೋಲಿಸಲೂ ಆಗುವುದಿಲ್ಲ. 'ಒಲಿಂಪಸ್ ಮಾನ್ಸ್'ನ ಎತ್ತರ 81,000 ಅಡಿ! ಎಂದರೆ ಸುಮಾರು 24.5 ಕಿ.ಮೀ.! ಗೌರೀಶಂಕರದ ಸುಮಾರು ಮೂರು ಪಟ್ಟು ಎತ್ತರ! ಎಂಥ ಪರ್ವತ! ಎಂಥ ಔನ್ನತ್ಯ!

■ ಎನ್. ವಾಸುದೇವ್